ಯಂತ್ರಗಳನ್ನು ಆದಷ್ಟು ಬೇಗ ರಿಪೇರಿ ಮಾಡಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಬೆಂಗಳೂರು ಮದರ್ ಡೈರಿಗೆ ಕೋಲಾರ ಜಿಲ್ಲೆಯಿಂದ ಹಾಲು ಬರುತ್ತದೆ. ಬೆಂಗಳೂರು ನಗರದ ಇಂದಿರಾನಗರದವರೆಗೂ ಅವರಿಗೆ ಹಾಲಿನ ಮಾರಾಟ ಮಾಡಲು ನಾವು ಅನುಮತಿಯನ್ನು ನೀಡಿದ್ದೇವೆ. ಮದರ್ ಡೈರಿ ಹಾಲು ಬಹಳ ಉತ್ಕೃಷ್ಟವಾಗಿರುತ್ತದೆ ಮತ್ತು ಈ ಮದರ್ ಡೈರಿ ಹಾಲಿನಲ್ಲಿ 8:5 ಪರ್ಸೆಂಟ್‌ನಷ್ಟು ಎಸ್.ಎನ್.ಎಫ್ ಇರುತ್ತದೆ. ಇದು ಒಳ್ಳೆಯ ಟೋನ್ಡ್ ಮಿಲ್ಕ್. ಆದರೆ ಈ ಮದರ್ ಡೈರಿಯಲ್ಲಿ ಕೆಲಸ ಮಾಡುವವರು ಈ ಯಂತ್ರಗಳನ್ನು ಕೆಡಿಸಿ ಹೊರಗಡೆ ಹಾಲು ಮಾರಾಟ ಮಾಡುತ್ತಿರುತ್ತಾರೆ. ಈ ಮದರ್ ಡೈರಿಯ ಕಾನ್‌ಸೆಪ್ಟ್ ಏನೆಂದರೆ ಗ್ರಾಹಕರು ಹಾಲಿನ ಕೇಂದ್ರಗಳಲ್ಲಿ ಆಗುತ್ತಿರುವ ಅವ್ಯವಹಾರವನ್ನು ತಪ್ಪಿಸಲು ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎ.ಕೃಷ್ಣಪ್ಪ:-ಮಾನ್ಯ ಅಧ್ಯಕ್ಷರೇ, ಈ ಮದರ್ ಡೈರಿ ಹಾಲಿನ ಕೇಂದ್ರಗಳಲ್ಲಿ ಏನಾದರೂ ಅವ್ಯವಹಾರಗಳು ಆಗುತ್ತಿರುವುದು ನನ್ನ ಗಮನಕ್ಕೆ ಬಂದ ತಕ್ಷಣ ನಾನು ಕ್ರಮ ತೆಗೆದುಕೊಂಡಿದ್ದೇನೆ. ಅದೂ ಬಹಳ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಯಾವುದಾದರೂ ಸ್ಪೆಸಿಫಿಕ್ ಆದ ಪ್ರಕರಣಗಳು ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಪತ್ರ ಬರೆದಿದ್ದಾರೆ. ಈ ಪ್ರಶ್ನೆಗಳನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಹಿಂದುಳಿದ ವರ್ಗಗಳ ಖಾಯಂ ಆಯೋಗದ ವರದಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 45(590)

ಸದಸ್ಯರ ಹೆಸರು : ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

1) ಅ) ಹಿಂದುಳಿದ ವರ್ಗಗಳ ಖಾಯಂ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ?

ಆ) ಸಲ್ಲಿಸಿದ್ದಲ್ಲಿ ಅದರ ವರದಿಯನ್ನು ಸಾರ್ವಜನಿಕರ ಗಮನಕ್ಕೆ ತರಲು ವಿಳಂಬವಾಗುತ್ತಿರುವುದೇತಕ್ಕೆ?

2) ಆಯೋಗವನ್ನು ಪುನರ್‌ರಚಿಸಿ ಕಾರ್ಯೋನ್ಮುಖರಾಗಲು ಅನುಕೂಲ ಮಾಡಿಕೊಡಲಾಗಿದೆಯೇ?

ಉತ್ತರ

1) ಅ) ಹಿಂದುಳಿದ ವರ್ಗಗಳ ಆಯೋಗವು ಜಾತಿಗಳಿಗೆ ಸಂಬಂಧಿಸಿದಂತೆ 71 ಸಲಹೆಗಳನ್ನು ಹಾಗೂ ವಿಶೇಷ ವರದಿಯನ್ನು ಸರ್ಕಾರಕ್ಕೆ ದಿ:4-12-2000ದಂದು ಸಲ್ಲಿಸಿದೆ.

ಆ) ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ವಿಶೇಷ ವರದಿಯನ್ನು ಪ್ರಕಟಿಸುವ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

2) ಸರ್ಕಾರವು ಈಗಾಗಲೇ ದಿ:19-6-2001ರಂದು ಆಯೋಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿದೆ. ಸದಸ್ಯರ ನೇಮಕಾತಿ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗಗಳ ಖಾಯಂ ಆಯೋಗವು ತನ್ನ ವರದಿಯನ್ನು ದಿನಾಂಕ 4-12-2000ದಂದು ಸರ್ಕಾರಕ್ಕೆ ಸಲ್ಲಿಸಿದೆ ಎಂದು ತಿಳಿಸಿದ್ದಾರೆ. ಆ ವರದಿಯನ್ನು ಸರ್ಕಾರ ವಿಧಾನ ಸಭೆಯಲ್ಲಿ ಇದುವರೆಗೂ ಏಕೆ ಮಂಡಿಸಿಲ್ಲ? ಈ ವರದಿಯನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ತೀವ್ರ ಪರಿಶೀಲನೆಗೆ ಇನ್ನೂ ಎಷ್ಟು ಸಮಯ ಬೇಕು? ಆ ವರದಿಯಲ್ಲಿ ಏನೇನು ಸಲಹೆಗಳನ್ನು ಮಾಡಿದ್ದಾರೆಂದು ದಯವಿಟ್ಟು ಸದನಕ್ಕೆ ತಿಳಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಈ ವರದಿಯನ್ನು ಸಚಿವ ಸಂಪುಟದ ಉಪ ಸಮಿತಿಗೆ ಕಳುಹಿಸಿದ್ದು ಅವರು ಈ ವರದಿಯನ್ನು ಪರಿಶೀಲಿಸುತ್ತಿದ್ದಾರೆ. ಈ ವಿಷಯ ಬಹಳ ಸೂಕ್ಷ್ಮವಾಗಿರುವುದರಿಂದ ವಿಶೇಷ ಗಮನವಿಟ್ಟು ಪರಿಗಣಿಸಬೇಕಾಗುತ್ತದೆ. ಆದಷ್ಟು ಬೇಗ ಹೆಚ್ಚು ಸಮಯ ತೆಗೆದುಕೊಳ್ಳದೆ ತೀರ್ಮಾನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಅಧ್ಯಕ್ಷರೇ, ದಿನಾಂಕ 4-12-2000ದಂದು

ಸರ್ಕಾರಕ್ಕೆ ಆಯೋಗ ವರದಿ ಸಲ್ಲಿಸಿದೆ. ಈ ವರದಿಯ ಬಗ್ಗೆ ಸರ್ಕಾರ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಸಹ ಒತ್ತಾಯ ಮಾಡುತ್ತೇನೆ. ಇದಾದ ಮೇಲೆ ಈ ಆಯೋಗದ ಕಾರ್ಯದರ್ಶಿಗಳು ಏನಿದ್ದಾರೆ ಅವರು ಅಧ್ಯಕ್ಷರ ಸಹಿಯನ್ನು ಫೋರ್ಜರಿ ಮಾಡಿದ್ದು ಅವರು ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ದೂರು ಸಹ ಸಲ್ಲಿಸಿದ್ದಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಈಗ ಈ ಆಯೋಗ ಸಲ್ಲಿಸಿರುವ ವರದಿ ಸಹ ಆ ಕಾರ್ಯದರ್ಶಿಗಳ ಬಳಿ ಇತ್ತು. ಅವರು ಅದರಲ್ಲಿ ಏನಾದರೂ ದುರುಪಯೋಗ ಮಾಡಿಲ್ಲ ಎಂದು ಹೇಗೆ ನಾವು ಹೇಳುವುದು? ಆ ಅಧಿಕಾರಿ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಮತ್ತು ಆ ಆಯೋಗದ ವರದಿಯನ್ನು ಯಾವಾಗ ಅನುಷ್ಠಾನಗೊಳಿಸುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ,..

ಶ್ರೀ ಕೆ.ಬಿ.ಮಲ್ಲಿಕಾರ್ಜುನ್:-ಮಾನ್ಯ ಅಧ್ಯಕ್ಷರೇ, ಆ ವರದಿಯಲ್ಲಿ ಆಯೋಗ ಏನೇನು ಶಿಫಾರಸ್ಸುಗಳನ್ನು ಮಾಡಿದೆ ಎನ್ನುವುದು ಗೊತ್ತಾಗಬೇಕಾದರೆ ಆ ವರದಿಯನ್ನು ಸದನದ ಮುಂದೆ ಮಂಡಿಸುತ್ತೀರಾ? ಮತ್ತು ನಮ್ಮ ಜಿಲ್ಲೆಯಲ್ಲಿರುವ ಒಂದು ಸಮಾಜದ ಬಗ್ಗೆ ಆಯೋಗ ಹಿಂದುಳಿದ ವರ್ಗಕ್ಕೆ ಸೇರಿಸಿ ಶಿಫಾರಸ್ಸು ಮಾಡಿದ್ದಾರೆಂದು ಗೊತ್ತಾಗಿದೆ, ಇದು ನಿಜವೇ?

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವ ಒಂದು ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ಶಿಫಾರಸ್ಸು ಮಾಡಿರುವುದು ನಿಜ. ಆದರೆ ಈ ವಿಷಯ ಈಗ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಇರುವುದರಿಂದ ನಾನು ಬಹಿರಂಗ ಪಡಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ಮಾನ್ಯ ಅಧ್ಯಕ್ಷರೇ, ಆಯೋಗ ತನ್ನ ವರದಿ ಸಲ್ಲಿಸಿದೆ. ಈ ಬಗ್ಗೆ ಕ್ರಮ ಸಕಾಲದಲ್ಲಿ ತೆಗೆದುಕೊಳ್ಳದಿದ್ದರೆ ಸರ್ಕಾರ ಯಾವ ಉದ್ದೇಶಕ್ಕಾಗಿ ಆಯೋಗ ನೇಮಕ ಮಾಡಿತ್ತು ಅದರ ಉದ್ದೇಶ ಡಿಫೀಟ್ ಆದಂತೆ ಆಗುವುದಿಲ್ಲವೇ? ಸರ್ಕಾರ ನಿಖರವಾಗಿ ಎಷ್ಟು ಸಮಯದಲ್ಲಿ ಮಾಡುತ್ತದೆ ಎಂಬುದನ್ನು ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಹೆಚ್ಚು ಕಡಿಮೆ ಒಂದು ತಿಂಗಳಲ್ಲಿ ಮಾಡುತ್ತೇವೆ.

ಅಧ್ಯಕ್ಷರು:- ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.